ಸಿ.ಸಿ.ನಂ.182/2016

ಸಿ.ಡಬ್ಲೂ-1 ಪಿ.ಡಬ್ಲೂ-1

ಸಾಕ್ಷಿಯನ್ನು ಇಂದು ದಿನಾಂಕ.15.05.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ 3 ನೇ ಆರೋಪಿ ಪರ ಬಿ.ಐ.ಎಸ. ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಪಿರ್ಯಾದಿಯನ್ನು ಕೊಡುವಾಗ ಇಂಗ್ಲಿಷನಲ್ಲಿ ಬೆರಳಚ್ಚು ಮಾಡಿಸಿ ಪಿರ್ಯಾದಿಯನ್ನು ನೀಡಿದ್ದೆನೆ. ನಾನು ದಿ.12.10.2012 ರಂದು ನಾನು ಬೆಳಿಗ್ಗೆ ಸುಮಾರು 9.30 ರಿಂದ 10.00 ಗಂಟೆಯೊಳಗೆ ಕಛೇರಿಗೆ ಬಂದಿರುತ್ತೇನೆ. ಆ ದಿನ ನನಗಿಂತ ಮುಂಚೆ ಕಛೇರಿಗೆ ಯಾವ ಸಿಬ್ಬಂದಿ ಬಂದಿದ್ದರು ಎಂದು ನನಗೆ ನೆನಪಿಲ್ಲ. ನಮ್ಮ ಬ್ಯಾಂಕಿನಲ್ಲಿ ಸಿಬ್ಬಂದಿ ಸುಮಾರು 6-7 ಜನ ಕೆಲಸ ಮಾಡುತ್ತಾರೆ. ಏಕಾಂತರಾಮಯ್ಯಾ ಫಿಲ್ಡ ಆಫೀಸರ, ಲಾಜರ ಫೀಲ್ಡ ಆಫೀಸರ, ಜಿ.ವಿ.ದೇಶಪಾಂಡೆ ಫೀಲ್ಡ ಆಫೀಸರ, ಸುರೇಶ ಆಲಗೂಡಕರ ಕ್ಯಾಶಿಯರ, ಸಮದರ.ಶಿ.ಪಾಲ ಕ್ಯಾಶಿಯರ, ಚಂದ್ರಕಾಂತ ಕೋಣಿ ಜವಾನ ಇವರು ನಮ್ಮ ಬ್ಯಾಂಕಿನ ಸಿಬ್ಬಂದಿ ಆಗಿರುತ್ತಾರೆ. ನಾನು ಬಂದ ನಂತರವೆ ನಮ್ಮ ಸಿಬ್ಬಂದಿ ಬ್ಯಾಂಕಿಗೆ ಬಂದರು. ದಿ.12.10.2012 ರಂದು ಬಂದ ಒಟ್ಟು ಡೆಪಾಜಿಟ ಮತ್ತು ಮತ್ತು ವಿತಡ್ರಾಗಳು ಎಷ್ಟು ಎಂದು ಹೇಳಲು ಬರುವುದಿಲ್ಲ. ರೂ.46,40,392 ರೂ.ಗಳು ಬ್ಯಾಂಕಿನಲ್ಲಿ ಇದ್ದವು ಎಂದು ತೋರಿಸಲು ನಾವು ಪೋಲಿಸರಿಗೆ ಎಕ್ಸಟ್ರ್ಯಾಕ್ಟನ್ನು ನೀಡಿದ್ದೆವೆ. ಆ ದಿನ ಬ್ಯಾಂಕಿನಲ್ಲಿ ಸುಮಾರು 4,500 ಗ್ರಾಂ ನಷ್ಟು ಬಂಗಾರವು ಬ್ಯಾಂಕಿನಲ್ಲಿತ್ತು. ಅವು ಆಭರಣ ರೂಪದಲ್ಲಿತ್ತು. ಅವು ಯಾವವವು ಎಂದು ಹೇಳಲು ಬರುವುದಿಲ್ಲ. ಅವು ಯಾರು ಯಾರಿಗೆ ಸೇರಿದವು ಎಂದು ಈಗ ಹೇಳಲು ಬರುವುದಿಲ್ಲ. ಹಾತ ನಕಾಶೆಯಲ್ಲಿ ತೋರಿಸಿರುವಂತೆ ಸೇಫ ಲಾಕರ ಕೋಣೆಯ ಗೋಡೆಯನ್ನು ಒಡೆಯದೆ ಬ್ಯಾಂಕಿನ ಹಿಂಭಾಗದಲ್ಲಿರುವ ಬಾಗಿಲು ಒಡೆದು ನಂತರ ಡೈನಿಂಗ ಹಾಲಿನ ಬಾಗಿಲನ್ನು ತೆಗೆದು ಸ್ಟ್ರಾಂಗ ರೂಮನ ಗೋಡೆ ಒಡೆದು ಒಳನುಗ್ಗಿರುತ್ತಾರೆ. ಹಾತ ನಕಾಶೆಯಲ್ಲಿ ತೋರಿಸಿರುವಂತೆ ಬ್ಯಾಂಕಿನ ಹಿಂಭಾಗದಲ್ಲಿ ಯಾವುದೇ ಬಾಗಿಲು ಇಲ್ಲ ಎಂದರೆ ನಕಾಶೆಯಲ್ಲಿ ತೋರಿಸಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿರುವುದರಿಂದ ಮುಂದೂಡಲಾಯಿತು).

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ಆಳಂದ.